# ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕೋಡಿ

## "PRACTICE ಮಾಡಿ, PERFECT ಆಗಿ" ಶೀರ್ಷಿಕೆ ಅಡಿಯಲ್ಲಿ

## ನೂತನ ಪರೀಕ್ಷೆ ಪದ್ದತಿಯಂತೆ ಬಹು ಆಯ್ಕೆ ಮಾದರಿಯ ಜಿಲ್ಲಾ ಮಟ್ಟದ ಪ್ರಶ್ನೆಪತ್ರಿಕೆ–2021

**ಪತ್ರಿಕೆ–01 (ಗಣಿತ + ವಿಜ್ಞಾನ + ಸಮಾಜ ವಿಜ್ಞಾನ) ಅಂಕ:–40+40+40=120 ಸಮಯ:– 03ಘಂಟೆ ದಿನಾಂಕ:–21.06.2021**

PRASANTH KUMAR ROYAL'S, M.A, B.Ed, D.Ed

I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಉತ್ತರ ಪತ್ರಿಕೆ ಓ.ಎಂ.ಆರ್(OMR)ನಲ್ಲಿ ಸರಿಯಾದ ಆಯ್ಕೆಯನ್ನು ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್‌ನಿಂದ ಶೇಡ್ ಮಾಡಿರಿ

**ಗಣಿತ** **40 X 1 = 40**

1. ಸಮಾಂತರ ಶ್ರೇಢಿಯ ಮೊದಲ $n$ ಪದಗಳ ಮೊತ್ತಕಂಡುಹಿಡಿಯುವ ಸೂತ್ರ

A) $S_n = \frac{n}{2}[2a + (n+1)d]$ B) $a_n = a + (n-1)d$

C) $S_n = \frac{n}{2}[2a + (n-1)d]$ D) $S_n = a + (n-1)d$

2. ಒಂದುಸಮಾಂತರ ಶ್ರೇಢಿಯಲ್ಲಿ $a_4 = 15$ ಮತ್ತು $a_5 = 12$ ಆದರೆ ಸಾಮಾನ್ಯ ವ್ಯತ್ಯಾಸ

A) 3 B) 4 C) -3 D) -4


3. ಮೊದಲ n ಬೆಸ ಸ್ವಾಭಾವಿಕ ಸಂಖ್ಯೆಗಳ ಮೊತ್ತ

A) $2n + 1$ B) $n^2$ C) $\frac{n}{2}$ D) $n^2 - 1$

4. $1, 4, 7, \ldots\ldots$ ಈ ಸಮಾಂತರ ಶ್ರೇಢಿಯ ನಾಲ್ಕನೇ ಮತ್ತು ಆರನೇ ಪದಗಳ ಬೆಲೆ ಎಷ್ಟು?

A) 10, 14 B) 9, 12 C) 11, 14 D) 10, 16

5. ಚಿತ್ರದಲ್ಲಿ $\angle BAC = 90°$ ಮತ್ತು $AD \perp BC$ ಆದರೆ ಈ ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆ





A) $BD.CD = BC^2$ B) $AB.AC = BC^2$

C) $BD.CD = AD^2$ D) $AB.AC = AD^2$

6. ವಜ್ರಾಕೃತಿಯ ಕರ್ಣಗಳು 16cm ಮತ್ತು 12cm ಅಳತೆಗಳನ್ನು ಹೊಂದಿದ್ದರೆ ಅದರ ಪ್ರತಿ ಬಾಹುವಿನ ಉದ್ದ

A) 10cm B) 8cm C) 20cm D) 9cm

7. $\Delta PQR$ ದಲ್ಲಿ $AB \parallel QR$ ಆಗಿದೆ. $PA = 1.5cm, AQ = 3cm$ ಮತ್ತು $BR = 4cm$ ಆದರೆ PBಯ ಉದ್ದ





A) 2 cm B) 6 cm

C) 4 cm D) 8 cm

DDPI, CHIKODI

PRASANTH KUMAR ROYAL'S, M.A, B.Ed, D.Ed

8. ಚಿತ್ರದಲ್ಲಿ PB ಮತ್ತು QA ಗಳು AB ಗೆ ಲಂಬವಾಗಿವೆ. $OA = 5cm$, $OP = 7cm$ ಮತ್ತು $\Delta QOA$ ಯ ವಿಸ್ತೀರ್ಣ $150cm^2$ ಆದರೆ $\Delta POB$ ಯ ವಿಸ್ತೀರ್ಣ




A) $233cm^2$ B) $300cm^2$

C) $420cm^2$ D) $294cm^2$

9. 24m ಎತ್ತರದ ಗೋಪುರದ ನೆರಳು 50m ಮತ್ತು ಅದೇ ಸಮಯದಲ್ಲಿ 1.8m ಎತ್ತರದ ಹುಡುಗಿಯ ನೆರಳಿನ ಉದ್ದವು

A) 3.75m B) 3.5m C) 3.25m D) 3m

10. ರೇಖಾತ್ಮಕ ಸಮೀಕರಣದಲ್ಲಿ ಅವ್ಯಕ್ತ ಪದದ ಗರಿಷ್ಠ ಘಾತವು

A) 1 B) 2 C) 3 D) 4

11. ಈ ಕೆಳಗಿನವುಗಳಲ್ಲಿ ಸ್ಥಿರ ಜೋಡಿ ಸಮೀಕರಣಗಳು

A) $x - y = 4, \ x + y = 2$ B) $2x - 3y = 6, \ 4x - 6y = 6$

C) $x - y = 2, \ y - x = -2$ D) $2x + y = 3, \ 2x + y = -3$

12. ಎರಡಂಕಿಯ ಒಂದು ಸಂಖ್ಯೆಯ ಅಂಕಿಗಳ ಮೊತ್ತ 9 ಮತ್ತು ಇದರಲ್ಲಿನ ಅಂಕಿಗಳ ಕ್ರಮವನ್ನು ಅದಲು ಬದಲು ಮಾಡಿದಾಗ ಸಿಗುವ ಸಂಖ್ಯೆಯನ್ನು ಇಮ್ಮಡಿಗೊಳಿಸಿದರೆ ಅದು ಮೊದಲನೆಯ ಸಂಖ್ಯೆಯ ಒಂಬತ್ತರಷ್ಟಕ್ಕೆ ಸಮವಾಗುತ್ತದೆ. ಈ ಹೇಳಿಕೆಯನ್ನು ಸಮೀಕರಣದರೂಪದಲ್ಲಿ ವ್ಯಕ್ತಪಡಿಸಿದಾಗ

A) $x + y = 9, \ y + x = 9$ B) $x + y = 9, \ 2y + x = 9$


C) $x + y = 9, \ 2(\overline{yx}) = 9(\overline{xy})$ D) $x + y = 9, \ 2x + 2y = 9$

13. $2x + y = 10$ ಈ ಸಮೀಕರಣದಕೋಷ್ಟಕದಲ್ಲಿ $a, b \ \& \ c$ ಗಳ ಬೆಲೆಗಳು ಕ್ರಮವಾಗಿ

| | | | | | |
|---|---|---|---|---|---|
| x | 2 | 4 | b | -2 | c |
| y | 6 | a | 4 | 14 | 12 |

A) $2, 3, 1$ B) $2, -3, 4$ C) $6, 3, -1$ D) $2, 3, -1$

14. ಪಕ್ಕದ ನಕ್ಷೆಯನ್ನು ಗಮನಿಸಿದಾಗ ಸಮೀಕರಣಗಳ ಜೋಡಿಯ ಪರಿಹಾರಗಳು



A) $(4, 4)$ B) $(5, 3)$

C) $(3, 4)$ D) $(3, 3)$


15. ವೃತ್ತವನ್ನು ಒಂದೇ ಒಂದು ಬಿಂದುವಿನಲ್ಲಿ ಛೇದಿಸುವ ರೇಖೆ

A) ಸ್ಪರ್ಶಕ B) ಜ್ಯಾ

C) ಛೇದಕ D) ಕಂಸ

16. ಒಂದು ವೃತ್ತಕ್ಕೆ ಬಾಹ್ಯ ಬಿಂದುವಿನಿಂದ ಎಳೆಯಬಹುದಾದ ಗರಿಷ್ಠ ಸ್ಪರ್ಶಕಗಳ ಸಂಖ್ಯೆ

A) ಅಪರಿಮಿತ B) ಒಂದು C) ಎರಡು D) ನಾಲ್ಕು





17. ಚಿತ್ರದಲ್ಲಿ ವೃತ್ತದ ತ್ರಿಜ್ಯವು MNಗೆ ಸಮವಾದರೆ $\angle MON$ನ ಬೆಲೆ

A) $90°$ B) $45°$ C) $60°$ D) $30°$

DDPI CHIKKODI


18. ಕೊಟ್ಟಿರುವ ಚಿತ್ರದಲ್ಲಿ AB, BC ಮತ್ತು CA ಗಳು ವೃತ್ತವನ್ನು ಕ್ರಮವಾಗಿ P, Q ಮತ್ತು R ಬಿಂದುಗಳಲ್ಲಿ ಸ್ಪರ್ಶಿಸಿವೆ. $\angle B = 80°$ ಮತ್ತು $\angle C = 40°$ ಆದರೆ $\angle POR$ನ ಅಳತೆ




A) 90°　　B) 100°

C) 110°　　D) 120°

19. ಚಿತ್ರದಲ್ಲಿ ಸಮರೂಪ ತ್ರಿಭುಜ ರಚನೆಯ ಅನುಪಾತದ ಮೌಲ್ಯವು




A) $\frac{4}{3}$　　B) $\frac{3}{4}$　　C) B$\frac{5}{3}$　　D) $\frac{3}{5}$

20. P(5, 6) ಬಿಂದುವು x− ಅಕ್ಷದಿಂದ ಇರುವ ದೂರ

A) 6 ಮಾನಗಳು　　B) 5 ಮಾನಗಳು　　C) $\sqrt{5}$ ಮಾನಗಳು　　D) 4ಮಾನಗಳು

21. $(\cos\theta, \sin\theta)$ ಮತ್ತು $(\sin\theta, -\cos\theta)$ ಬಿಂದುಗಳ ನಡುವಿನ ದೂರ

A) $\sqrt{3}$ ಮಾನಗಳು　　B) $\sqrt{5}$ ಮಾನಗಳು　　C) 2 ಮಾನಗಳು　　D) $\sqrt{2}$ ಮಾನಗಳು

22. (k, −2), (5, 1)ಮತ್ತು(3, 4) ಬಿಂದುಗಳು ಸರಳರೇಖಾಗತವಾಗಿದ್ದರೆ k ಯ ಬೆಲೆ

A) 3　　B) 1　　C) 7　　D) 4

23. A(1, 7), B(4, 2), C(−1, −1) ಮತ್ತು D(−4, 4) ಬಿಂದುಗಳು ಚೌಕದ ಶೃಂಗಗಳಾದರೆ, ಚೌಕದ ಕರ್ಣದ ಉದ್ದ

A) $\sqrt{86}$ ಮಾನಗಳು　　B) $\sqrt{68}$ ಮಾನಗಳು　　C) $\sqrt{34}$ ಮಾನಗಳು　　D) $\sqrt{43}$ ಮಾನಗಳು

24. $ax^2 + bx + c = 0$ ವರ್ಗಸಮೀಕರಣದ ಮೂಲಗಳು ಸಮವಾದರೆ ಈ ಕೆಳಗಿನವುಗಳಲ್ಲಿ ಸರಿಯಾದ ಹೇಳಿಕೆ

A) $b^2 - 4ac = 1$　　B) $b^2 - 4ac > 0$　　C) $b^2 - 4ac = 0$　　D) $b^2 - 4ac < 0$

25. ಈ ಕೆಳಗಿನವುಗಳಲ್ಲಿ ಯಾವುದು ವರ್ಗ ಸಮೀಕರಣವಲ್ಲ?

A) $(x+1)^2 = 2(x-3)$　　B) $x^2 - 2x = 8$

C) $(x+1)^2 - x^2 = 0$　　D) $(x+3)(x+4) = 0$

26. ಎರಡು ಅನುಕ್ರಮ ಧನ ಪೂರ್ಣಾಂಕಗಳ ಗುಣಲಬ್ಧ 306 ಆಗಿದೆ. ಈ ಹೇಳಿಕೆಯ ಸಮೀಕರಣದ ರೂಪ

A) $(x+1)(x+3) = 306$　　B) $(x-1)(x+1) = 306$

C) $x + (x+1) = 306$　　D) $x(x+1) = 306$

27. $a = \frac{36}{4a}$ ಆದರೆ a ಯ ಬೆಲೆ

A) ±3　　B) −3　　C) 3　　D) ±9

28. ಈ ಕೆಳಗಿನವುಗಳಲ್ಲಿ $\sin(90^0 - \theta)$ ಗೆ ಸಮನಾದುದು

A) $\cot\theta$　　B) $\sin\theta$　　C) $\operatorname{cosec}\theta$　　D) $\frac{1}{\sec\theta}$

29. $\tan 45^0 + \sin 0°$ ಯ ಬೆಲೆ

A) 1　　B) 0　　C) 2　　D) 3


30. ಈ ಕೆಳಗಿನ ನಿತ್ಯ ಸಮೀಕರಣಗಳಲ್ಲಿ ತಪ್ಪಾಗಿರುವ ನಿತ್ಯ ಸಮೀಕರಣ

A) $\sin^2\theta + \cos^2\theta = 1$　　B) $1 + \tan^2\theta = \sec^2\theta$

C) $1 + \operatorname{cosec}^2\theta = \cot^2\theta$　　D) $1 + \cot^2\theta = \operatorname{cosec}^2\theta$

PRASANTH KUMAR ROYAL'S, M.A, B.Ed, D.Ed
DDPI CHIKKODI

31. ಚಿತ್ರದಲ್ಲಿ PR = 6cm ಮತ್ತು $\theta = 45°$ ಆದರೆ QR ಮತ್ತು PQ ಗಳ ಅಳತೆಗಳು ಕ್ರಮವಾಗಿ




A) $6\sqrt{2}, 2$  B) $6\sqrt{2}, 6$

C) $2, 6\sqrt{2}$  D) $6\sqrt{2}, \sqrt{2}$

32. $\sec^4\theta - \sec^2\theta$ಗೆ ಸಮನಾದುದು

A) $\sec^2\theta(1 - \sec^2\theta)$  B) $\sec^2\theta(1 + \sec^2\theta)$

C) $\tan^2\theta - \tan^4\theta$  D) $\tan^2\theta + \tan^4\theta$

33. ಈ ಕೆಳಗಿನವುಗಳಲ್ಲಿ ಯಾವುದು ಸರಾಸರಿ, ಮಧ್ಯಾಂಕ ಮತ್ತು ಬಹುಲಕಗಳ ನಡುವಿನ ಸರಿಯಾದ ಸಂಬಂಧವಾಗಿದೆ?

A) 3 ಮಧ್ಯಾಂಕ = 2ಬಹುಲಕ + ಸರಾಸರಿ  B) 2 ಮಧ್ಯಾಂಕ = 3 ಬಹುಲಕ + ಸರಾಸರಿ


C) 3 ಮಧ್ಯಾಂಕ = ಬಹುಲಕ + 2ಸರಾಸರಿ  D) ಮಧ್ಯಾಂಕ = ಬಹುಲಕ + ಸರಾಸರಿ

34. 12, 14, 16, $x + 2$, $x + 4$, 22, 24, 26 ಇವುಗಳ ಮಧ್ಯಾಂಕ 19 ಆದರೆ x ನ ಬೆಲೆ

A) 18  B) 16

C) 15  D) 20

35. ಕೊಟ್ಟಿರುವ ಓಜೀವ್ ನಕ್ಷೆಯ ಪ್ರಕಾರ ಮಧ್ಯಾಂಕದ ಬೆಲೆ



A) 20  B) 30

C) 50  D) 40

36. ಶಂಕುವಿನ ಛಿನ್ನಕದ ಪಾರ್ಶ್ವ ಮೇಲ್ಮೈ ವಿಸ್ತೀರ್ಣ

A) $\pi(+r_1 + r_2)l$ ಚ. ಮಾನಗಳು  B) $\pi rl$ ಚ. ಮಾನಗಳು

C) $\frac{1}{3}\pi h(r_1^2 + r_2^2 + r_1 r_2)$ ಚ.ಮಾನಗಳು  D) $\pi r^2 h$ ಚ. ಮಾನಗಳು

37. ಪಕ್ಕದಲ್ಲಿರುವ ಔಷಧ ಕ್ಯಾಪ್ಸೂಲನಲ್ಲಿರುವ ಔಷಧದ ಘನಫಲವು ಈ ಕೆಳಗಿನವುಗಳಲ್ಲಿ ಯಾವುದರ ಘನಫಲಕ್ಕೆ ಸಮ?



A) ಸಿಲಿಂಡರ+ಶಂಕು  B) 2ಅರ್ಧಗೋಳ+ಸಿಲಿಂಡರ್

C) 2ಅರ್ಧಗೋಳ+ಆಯತಘನ  D) ಗೋಳ+ಶಂಕು

38. $49cm \times 33cm \times 24cm$ ಅಳತೆಯ ಕಬ್ಬಿಣದ ಆಯತ ಘನವನ್ನು ಕರಗಿಸಿ ಒಂದು ಗೋಳವನ್ನು ಮಾಡಲಾಗಿದೆ. ಹಾಗಾದರೆ ಗೋಳದ ತ್ರಿಜ್ಯವು

A) 19$cm$  B) 25$cm$  C) 23cm  D) 21cm

39. ಒಂದು ಘನದ ಮೇಲ್ಮೈ ವಿಸ್ತೀರ್ಣವು ಸಾಂಖ್ಯಿಕವಾಗಿ ಅದರ ಘನಫಲಕ್ಕೆ ಸಮವಾಗಿದ್ದರೆ ಅದರ ಅಂಚಿನ ಉದ್ದ

A) 8 ಮಾನಗಳು  B) 2 ಮಾನಗಳು  C) 6 ಮಾನಗಳು  D) 4 ಮಾನಗಳು

40. r cm ತ್ರಿಜ್ಯ ಮತ್ತು h cm ಎತ್ತರವಿರುವ $(h > 2r)$ ನೇರ ವೃತ್ತಾಕಾರದ ಸಿಲಿಂಡರವು ಗೋಳವನ್ನು ಸಂಪೂರ್ಣವಾಗಿ ಆವರಿಸಿದೆ. ಹಾಗಾದರೆ ಗೋಳದ ವ್ಯಾಸ

A) r cm  B) 2r cm  C) h cm  D) 2h cm

*************************************************

PRASANTH KUMAR ROYAL'S, M.A, B.Ed, D.Ed

## ವಿಜ್ಞಾನ

**40 X 1 = 40**

41. ವಿದ್ಯುತ್ ವಿಭವಾಂತರವನ್ನು ಅಳೆಯುವ ಉಪಕರಣ ಮತ್ತು SI ಏಕಮಾನ ಕ್ರಮವಾಗಿ

A) ರಿಯೋಸ್ಟಾಟ್ ಮತ್ತು ವೋಲ್ಟ್ B) ವೋಲ್ಟ್ಮೀಟರ್ & ಅಂಪೀರ್

C) ವೋಲ್ಟಾಮೀಟರ & ವೋಲ್ಟ D) ವೋಲ್ಟಮೀಟರ್ & ವೋಲ್ಟ

42. ನಿಮ್ಮ ಬೆನ್ನು ಒಂದು ಗೋಡೆಯನ್ನು ಆಧರಿಸುವಂತೆ ನೀವು ಒಂದು ಕೊಠಡಿಯಲ್ಲಿ ಕುಳಿತಿರುವಿರೆಂದು ಭಾವಿಸಿ. ಹಿಂದಿನ ಗೋಡೆಯಿಂದ ಮುಂದಿನ ಗೋಡೆಯ ಕಡೆಗೆ ಸಮಾಂತರವಾಗಿ ಬರುತ್ತಿರುವ ಇಲೆಕ್ಟ್ರಾನ್ ಪುಂಜವು ಪ್ರಬಲ ಕಾಂತಕ್ಷೇತ್ರದಿಂದ ನಿಮ್ಮ ಬಲ ಬದಿಗೆ ವಿಚಲನೆ ಹೊಂದುತ್ತದೆ. ಹಾಗಾದರೆ ಕಾಂತಕ್ಷೇತ್ರದ ದಿಕ್ಕು

A) ನಿಮ್ಮ ಬಲಕ್ಕೆ B) ನಿಮ್ಮ ಎಡಕ್ಕೆ

C) ಕೆಳಮುಖವಾಗಿ D) ಮೇಲ್ಮುಖವಾಗಿ

43. ಋಣಾತ್ಮಕ ಡಯಾಪ್ಟರ್ ಹೊಂದಿರುವ ಮಸೂರದ ವಿಧ ಮತ್ತು ಅದರಿಂದ ಸರಿಪಡಿಸುವ ದೃಷ್ಟಿ

A) ಪೀನ, ದೂರದೃಷ್ಟಿ B) ಪೀನ, ಸಮೀಪದೃಷ್ಟಿ

C) ನಿಮ್ನ, ದೂರದೃಷ್ಟಿ D) ನಿಮ್ನ, ಸಮೀಪದೃಷ್ಟಿ

44. ವಸ್ತುವನ್ನು ಪೀನ ಮಸೂರದ 2F ನಲ್ಲಿ ಇರಿಸಿದಾಗ ಉಂಟಾಗುವ ಪ್ರತಿಬಿಂಬದ ಸ್ವಭಾವ ಮತ್ತು ಗಾತ್ರ

A) ಮಿಥ್ಯ, ನೇರ & ದೊಡ್ಡದು B) ಸತ್ಯ, ನೇರ & ಚಿಕ್ಕದು

C) ಸತ್ಯ, ತಲೆಕೆಳಗಾದ & ಸಮಗಾತ್ರ D) ಮಿಥ್ಯ, ನೇರ & ಚಿಕ್ಕದು

45. ಒಂದು ವಾಹಕದ ರೋಧವು 27Ω ಆಗಿದೆ ಅದನ್ನು ಮೂರು ಸಮಭಾಗಗಳಾಗಿ ಕತ್ತರಿಸಿ ಸಮಾಂತರವಾಗಿ ಜೋಡಿಸಿದಾಗ ಅದರ ಒಟ್ಟು ರೋಧ

A) 6 Ω B) 3 Ω

C) 9 Ω D) 27 Ω

46. 18 V ವಿಭವಾಂತರ ಹೊಂದಿರುವ ಎರಡು ಬಿಂದುಗಳ ನಡುವೆ 3 C ಆವೇಶಗಳು, ಚಲಿಸಿದಾಗ ನಡೆದ ಕೆಲಸ?

A) 6 J B) 21 J

C) 15 J D) 54 J

47. ಜೈವಿಕ ಅನಿಲ ಸ್ಥಾವರದಲ್ಲಿ ಕಂಡು ಬರುವ ಆಕ್ಸಿಜನರಹಿತ, ಮೊಹರಾದ ಕೋಣೆ

A) ಮಿಶ್ರಣ ತೊಟ್ಟಿ B) ಪಾಚಕ

C) ಅನಿಲ ತೊಟ್ಟಿ D) ಬಗ್ಗಡ

48. ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಸಾಧನ

A) ಮೋಟಾರ B) ರೆಫ್ರಿಜಿರೇಟರ್

C) ಡೈನಮೊ D) ಇನವರ್ಟರ

49. ಉಷ್ಣೋತ್ಪನ್ನ ಸುರುಳಿಗಳಲ್ಲಿ ಬಳಸುವ ವಾಹಕದ ರೋಧಶೀಲತೆಯು ವಿದ್ಯುತ್ ಸಾಗಾಣಿಕೆಯ ವಾಹಕದ ರೋಧಶೀಲತೆಗಿಂತ/ಗೆ

A) ಹೆಚ್ಚು B) ಕಡಿಮೆ

C) ಸಮ D) ನಿರ್ಧರಿಸಲಿಕ್ಕಾಗದು

50. ವಿದ್ಯುದಾವೇಶಗಳ SI ಏಕಮಾನ

A) ವೋಲ್ಟ B) ಅಂಪೀಯರ್

C) ಕೂಲಾಮ್ D) ಜೌಲ್

PRASANTH KUMAR ROYAL'S, M.A, B.Ed, D.Ed

DDPI CHIKKODI

PRASANTH KUMAR ROYAL'S, M.A, B.Ed, D.Ed

51. ಒಂದು ಸೊಲೆನಾಯ್ಡನ ಒಳಭಾಗದಲ್ಲಿ ಕಾಂತೀಯ ಬಲರೇಖೆಗಳು ಸರಳ ರೇಖೆಗಳಂತೆ ಇರುತ್ತವೆ. ಇದಕ್ಕೆ ಕಾರಣ ಸೊಲೆನಾಯ್ಡನ ಒಳಭಾಗದಲ್ಲಿರುವ ಕಾಂತಕ್ಷೇತ್ರವು

A) ಹೆಚ್ಚಾಗಿರುತ್ತದೆ　　B) ಏಕರೂಪವಾಗಿರುತ್ತದೆ
C) ಸೊನ್ನೆಯಾಗಿರುತ್ತದೆ　　D) ಕಡಿಮೆಯಾಗಿರುತ್ತದೆ

52. ಕೆಳಗಿನ ಕೋಷ್ಟಕ ಗಮನಿಸಿ ಓಮ್‌ನ ನಿಯಮ ಅನ್ವಯಿಸಿ $X$ ಮತ್ತು $Y$ ನ ಬೆಲೆಗಳು

| ವಿದ್ಯುತ್ಪ್ರವಾಹ "I" | ವಿಭವಾಂತರ "V" | ರೋಧ "R" |
|---|---|---|
| 2A | 120 V | 60 Ω |
| 1.5A | Y | 60 Ω |
| X | 60 V | 60 Ω |

A) X = 90, Y=1
B) X = 4, Y=90
C) X = 1, Y=90
D) X = 1, Y=4

53. ಒಂದು ಮಸೂರದ ವಕ್ರತಾ ತ್ರಿಜ್ಯ 34c.m. ಆದರೆ ಅದರ ಸಂಗಮ ದೂರ

A) 17 m.　　B) 17 c.m.
C) 68 c.m.　　D) 68 m.

54. ಈ ಕೆಳಗಿನವುಗಳಲ್ಲಿ ಉತ್ತಮ ಇಂಧನದ ಲಕ್ಷಣ

A) ಸುಲಭವಾಗಿ ಲಭ್ಯತೆ　　B) ಸುಲಭ ಸಂಗ್ರಹ & ಸಾಗಣೆ
C) ಮಿತವ್ಯಯಕಾರಿ　　D) ಈ ಎಲ್ಲವೂ

55. ಉಷ್ಣದ ಅತ್ಯುತ್ತಮ ವಾಹಕಗಳಿಗೆ ಉದಾಹರಣೆ

A) ಸೀಸ ಮತ್ತು ಪಾದರಸ　　B) ಬೆಳ್ಳಿ ಮತ್ತು ತಾಮ್ರ
C) ಸೀಸ ಮತ್ತು ತಾಮ್ರ　　D) ಬೆಳ್ಳಿ ಮತ್ತು ಪಾದರಸ

56. $CH_4 + Cl_2 \longrightarrow CH_3Cl + HCl$ (ಸೂರ್ಯನ ಬೆಳಕಿನ ಸಮ್ಮುಖದಲ್ಲಿ)
ಇದು ಯಾವ ವಿಧದ ರಾಸಾಯನಿಕ ಕ್ರಿಯೆಗೆ ಉದಾಹರಣೆಯಾಗಿದೆ.

A) ಆದೇಶನ ಕ್ರಿಯೆ　　B) ಸಂಕಲನ ಕ್ರಿಯೆ
C) ಉತ್ಕರ್ಷಣ ಕ್ರಿಯೆ　　D) ದಹನ ಕ್ರಿಯೆ


57. Na, Ca, K, Mg ಈ ಲೋಹಗಳನ್ನು ಅವುಗಳ ಕ್ರಿಯಾಶೀಲತೆಯ ಇಳಿಕೆ ಕ್ರಮದಲ್ಲಿ ಬರೆದಾಗ

A) Na > Ca > K > Mg　　B) Mg > K > Ca > Na
C) K > Na > Ca > Mg　　D) Mg > Ca > Na > K

58. ನೀರಿನಲ್ಲಿ ವಿಲೀನವಾಗುವ ಪ್ರತ್ಯಾಮ್ಲಗಳು

A) ಲವಣಗಳು　　B) ಕ್ಷಾರಗಳು
C) ಆಮ್ಲಗಳು　　D) ಕ್ರಿಯಾವರ್ಧಕಗಳು

59. ಈ ಕಾರ್ಬನ್ ಸಂಯುಕ್ತದಲ್ಲಿರುವ ಕ್ರಿಯಾಗುಂಪು



A) ಕೀಟೋನ್　　B) ಅಲ್ಡಿಹೈಡ್　　C) ಆಲ್ಕೋಹಾಲ್　　D) ಕಾರ್ಬಾಕ್ಸಿಲಿಕಾಮ್ಲ

60. ಧಾತುಗಳ ವರ್ಗೀಕರಣಕ್ಕಾಗಿ ಅಷ್ಟಕಗಳ ನಿಯಮ ರೂಪಿಸಿದವರು.

A) ನ್ಯೂಲ್ಯಾಂಡ್　　B) ಡೊಬರೈನರ್
C) ಮೆಂಡಲೀವ್　　D) ಹೆನ್ರಿ ಮೋಸ್ಲೆ

DDPI, CHIKKODI

PRASANTH KUMAR ROYAL'S, M.A, B.Ed, D.Ed

61. ರಾಸಾಯನಿಕವಾಗಿ ಬದಲಾವಣೆಗೊಳಪಡದೆ, ಕ್ರಿಯಾದರದಲ್ಲಿ ಬದಲಾವಣೆ ತರುವ ರಾಸಾಯನಿಕಗಳೇ

A) ಉತ್ಕರ್ಷಣಕಾರಿಗಳು B) ಅಪಕರ್ಷಣಕಾರಿಗಳು

C) ಕ್ರಿಯಾವರ್ಧಕಗಳು D) ಕ್ಷಾರಗಳು

62. ಧಾತುವೊಂದರ ಇಲೆಕ್ಟ್ರಾನಿಕ್ ವಿನ್ಯಾಸ ಬರೆದಾಗ ಇಲೆಕ್ಟ್ರಾನಗಳು K, L ಮತ್ತು M ಕವಚಗಳಲ್ಲಿ ಹಂಚಿಕೆಯಾದರೆ ಆ ಧಾತು ಯಾವ ಆವರ್ತಕ್ಕೆ ಸೇರಿದೆ.

A) 2ನೇ ಆವರ್ತ B) 4ನೇ ಆವರ್ತ

C) 6ನೇ ಆವರ್ತ D) 3ನೇ ಆವರ್ತ

63. ಬೆಸುಗೆ ಲೋಹದ ಘಟಕಗಳು

A) ಸೀಸ ಮತ್ತು ತವರ B) ಸೀಸ ಮತ್ತು ತಾಮ್ರ

C) ತವರ ಮತ್ತು ತಾಮ್ರ D) ತವರ ಮತ್ತು ಕಬ್ಬಿಣ

64. ಕೆಳಗಿನವುಗಳಲ್ಲಿ ಸಂಶ್ಲೇಷಿತ ಸೂಚಕ

A) ಅರಿಷಿಣ B) ಲಿಟ್ಮಸ್ ಕಾಗದ

C) ಫಿನಾಪ್ತಲೀನ್ D) ಈ ಎಲ್ಲವೂ

65. $P^H$ ಮೌಲ್ಯ 7 ರಿಂದ 14ರೆಡೆಗೆ ಹೆಚ್ಚಾದಂತೆ ದ್ರಾವಣದಲ್ಲಿನ

A) $OH^-$ ಅಯಾನುಗಳ ಸಾರತೆ ಕಡಿಮೆಯಾಗುತ್ತದೆ B) $OH^-$ ಅಯಾನುಗಳ ಸಾರತೆ ಅಧಿಕವಾಗುತ್ತದೆ

C) $H^+$ ಅಯಾನುಗಳ ಸಾರತೆ ಅಧಿಕವಾಗುತ್ತದೆ D) $H^+$ & $OH^-$ ಅಯಾನುಗಳೆರಡರ ಸಾರತೆ ಕಡಿಮೆಯಾಗುತ್ತದೆ

66. ಸೈಕ್ಲೋಹೆಕ್ಸೇನ್ ಕೆಳಗಿನ ಯಾವ ಸಾಮಾನ್ಯ ಸೂತ್ರವನ್ನು ಹೊಂದಿದೆ.

A) $C_n H_{2n}$ B) $C_nH_{2n+2}$

C) $C_n H_{2n-2}$ D) $C_nH_{2n-1}$

67. ಮಾನವನ ಹೃದಯದಲ್ಲಿ ಆಕ್ಸಿಜನ್ ಸಮೃದ್ಧ ರಕ್ತದ ಹರಿವಿನ ಸರಿಯಾದ ಮಾರ್ಗ

A) ಶ್ವಾಸಕೋಶ → ಎಡ ಹೃತ್ಕರ್ಣ → ಎಡ ಹೃತ್ಕುಕ್ಷಿ → ದೇಹದ ಎಲ್ಲ ಭಾಗ

B) ದೇಹದ ಎಲ್ಲ ಭಾಗ → ಎಡ ಹೃತ್ಕುಕ್ಷಿ → ಎಡ ಹೃತ್ಕರ್ಣ → ಶ್ವಾಸಕೋಶ

C) ಎಡ ಹೃತ್ಕರ್ಣ → ಎಡ ಹೃತ್ಕುಕ್ಷಿ → ಶ್ವಾಸಕೋಶ → ದೇಹದ ಎಲ್ಲ ಭಾಗ

D) ಶ್ವಾಸಕೋಶ → ಎಡ ಹೃತ್ಕುಕ್ಷಿ → ಎಡ ಹೃತ್ಕರ್ಣ → ದೇಹದ ಎಲ್ಲ ಭಾಗ

68. ಸಸ್ಯಗಳಲ್ಲಿ ಮಣ್ಣಿನ ಸಂಪರ್ಕದಲ್ಲಿರುವ ಅಂಗಗಳು ಮತ್ತು ಕ್ಲೋರೋಫಿಲ್ ಹೊಂದಿರುವ ಅಂಗಗಳ ನಡುವಿನ ಅಂತರ ಹೆಚ್ಚಿದಾಗ ಸಾಗಾಣಿಕೆಗೆ ನೆರವಾಗುವ ವ್ಯವಸ್ಥೆ

A) ವಿಸರಣೆ B) ಸಮರ್ಪಕ ಸಾಗಾಣಿಕೆ

C) ಅಭಿಸರಣೆ D) ಚೋಷಣ

69. ನರವ್ಯೂಹ ವ್ಯವಸ್ಥೆಯು ದೇಹದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಮಾಹಿತಿಯನ್ನು ಇವುಗಳ ಮೂಲಕ ಸಾಗಿಸುತ್ತದೆ

A) ರಾಸಾಯನಿಕ ಆವೇಗಗಳು B) ವಿದ್ಯುತ್ ಆವೇಗಗಳು

C) ಹಾರ್ಮೋನುಗಳು D) ಕಾಂತೀಯ ಆವೇಗಗಳು

70. ಸಸ್ಯಗಳಲ್ಲಿ ಅವುಗಳ ಬೆಳವಣಿಯಗೆಯನ್ನು ಆದರಿಸಿ ಉಂಟಾಗದ ಪ್ರತಿಕ್ರಿಯೆಯೆಂದರೆ

A) ಕಾಂಡಗಳು ಬೆಳಕಿನ ಕಡೆಗೆ ಬಾಗುವುದು B) ಬೇರುಗಳು ಮಣ್ಣಿನಾಳಕ್ಕೆ ಇಳಿಯುವುದು

C) ಎಲೆಗಳನ್ನು ಸ್ಪರ್ಶಿಸಿದಾಗ ಮುದುರುವುದು D) ಬಳ್ಳಿಯೊಂದರ ಕುಡಿಗಳು ಮೇಲೇರುವುದು

DDPI CHIKKODI


PRASANTH KUMAR ROYAL'S, M.A, B.Ed, D.Ed

71. ಅಂಡಾಣುಗಳ ಕಡೆಗೆ ಪರಾಗುರೇಣು ನಳಿಕೆಗಳ ಬೆಳವಣಿಗೆಯು ಇದಕ್ಕೆ ಉದಾಹರಣೆಯಾಗಿದೆ

A) ದ್ಯುತಿಅನುವರ್ತಣೆ B) ಗುರುತ್ವಾನುವರ್ತನೆ

C) ರಾಸಾಯನಿಕಾನುವರ್ತನೆ D) ಜಲಾನುವರ್ತನೆ

72. ಈ ಚಿತ್ರದಲ್ಲಿ ಸೂಚಿಸಿದ ಮೆದುಳಿನ ಭಾಗ ಮತ್ತು ಕಾರ್ಯದ ಸರಿಯಾದ ಆಯ್ಕೆ ಎಂದರೆ



A) ಮಹಾಮಸ್ತಿಷ್ಕ – ದೇಹದ ಸಮತೋಲನೆ

B) ಅನುಮಸ್ತಿಷ್ಕ – ದೇಹದ ತಾಪಮಾನದ ನಿಯಂತ್ರಣ

C) ಅನುಮಸ್ತಿಷ್ಕ – ದೇಹದ ಸಮತೋಲನೆ

D) ಮಹಾಮಸ್ತಿಷ್ಕ – ದೇಹದ ತಾಪಮಾನದ ನಿಯಂತ್ರಣ

73. ಸಂತಾನೋತ್ಪತ್ತಿಯಲ್ಲಿ ಪಾಲ್ಗೊಳ್ಳುವ ಹೂವಿನ ಭಾಗಗಳು

A) ಕೇಸರ ಮತ್ತು ಪುಷ್ಪಪಾತ್ರೆ B) ಶಲಾಕೆ ಮತ್ತು ಕೇಸರ

C) ಪುಷ್ಪದಳ ಮತ್ತು ಕೇಸರ D) ಕೇಸರ ಮತ್ತು ತೊಟ್ಟು

74. ಋತು ಚಕ್ರದ ಕುರಿತಂತೆ ಸರಿಯಲ್ಲದ ಹೇಳಿಕೆ

A) ಅಂಡ ಫಲಿತಗೊಳ್ಳದಿದ್ದಾಗ ಉಂಟಾಗುತ್ತದೆ B) ಅಂಡ ಫಲಿತಗೊಂಡಾಗ ಉಂಟಾಗುತ್ತದೆ

C) ಪ್ರತಿ ತಿಂಗಳು ನಡೆಯುತ್ತದೆ D) 2 ರಿಂದ 8 ದಿನಗಳವರೆಗೆ ಮುಂದುವರೆಯುತ್ತದೆ

75. ಈ ಕೆಳಗಿನವುಗಳಲ್ಲಿ 'ಕಾಪರ್–ಟಿ'ಯ ಪ್ರಮುಖ ಕಾರ್ಯವೆಂದರೆ,

i) ಗರ್ಭನಿರೋಧಕ ii) ಲೈಂಗಿಕ ಸಂಪರ್ಕದಿಂದ ಹರಡುವ ರೋಗಗಳ ತಡೆಯುವಿಕೆ

A) i ಮಾತ್ರ ಸರಿ B) ii ಮಾತ್ರ ಸರಿ

C) i ಮತ್ತು ii ಎರಡೂ ಸರಿ D) i ಮತ್ತು ii ಎರಡೂ ತಪ್ಪು

76. ಜೀವಿಯ ಬದುಕಿಗೆ ಉಪಯುಕ್ತವಾಗದೇ, ಕೇವಲ ವೈವಿಧ್ಯತೆಯನ್ನು ಒದಗಿಸುವ ಆನುವಂಶೀಯ ಗುಣವೇ

A) ನಿಸರ್ಗದ ಆಯ್ಕೆ B) ಪ್ರಭೇಧೀಕರಣ

C) ದಿಕ್ಚ್ಯುತಿ D) ಉತ್ಪರಿವರ್ತನೆ

77. ಇವುಗಳಲ್ಲಿ ಸರಿಯಾದ ಹೇಳಿಕೆ ಎಂದರೆ

A) ಚಿತ್ರನಟರ ಮಕ್ಕಳು ನಟನೆಯನ್ನು ತಮ್ಮ ತಂದೆಯಿಂದ ಆನುವಂಶೀಯವಾಗಿ ಪಡೆದುಕೊಳ್ಳುತ್ತಾರೆ.

B) ಬಾಲವಿಲ್ಲದ ಇಲಿಗಳಿಂದ ಬಾಲವಿಲ್ಲದ ಇಲಿಮರಿಗಳು ಹುಟ್ಟುತ್ತವೆ

C) ಎತ್ತರವಿರುವ ಪೋಷಕರಿಂದ ಹುಟ್ಟುವ ಮಕ್ಕಳು ಎತ್ತರವಾಗಿಯೇ ಬೆಳೆಯುತ್ತಾರೆ.

D) ಜೀವಿಯೊಂದು ತನ್ನ ಜೀವಿತ ಕಾಲದ ಅನುಭವಗಳನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಲು ಸಾಧ್ಯವಿಲ್ಲ

78. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ಯಾವುದು ಪೂರಕ ಅಂಶವಾಗಿದೆ

A) ರೆಫ್ರಿಜರೇಟರ ನೀರಿನ ಬಳಕೆ B) ಅಡುಗೆ ಮನೆ ತ್ಯಾಜ್ಯದಿಂದ ಗೊಬ್ಬರ ತಯಾರಿಕೆ

C) ತ್ಯಾಜ್ಯ ಪದಾರ್ಥಗಳ ದಹನ D) ಕಾಫಿ, ಟಿ ಕುಡಿಯಲು ಒಮ್ಮೆ ಮಾತ್ರ ಬಳಸಬಹುದಾದ ಲೋಟಗಳ ಬಳಕೆ

79. ಕೆಳಗಿನವುಗಳಲ್ಲಿ ಯಾವುದು ಹಸಿರು ಮನೆ ಅನಿಲವಾಗಿದೆ

A) ಇಂಗಾಲ B) ಆಮ್ಲಜನಕ

C) ಕಾರ್ಬನ್ ಡೈ ಆಕ್ಸೈಡ್ D) ಹೈಡ್ರೋಜನ್ ಅನೀಲ

80. ಬಳಸಿದ ಕಾಗದಿಂದ ಲಕೋಟೆಗಳ ತಯಾರಿಕೆ : ಮರುಬಳಕೆ :: ಬಳಸಿದ ಪ್ಲಾಸ್ಟಿಕಗಳ ನಿರ್ವಹಣೆ

A) ಮಿತಬಳಕೆ B) ನಿರಾಕರಣೆ

C) ಮರುಚಕ್ರೀಕರಣ D) ಮರುಬಳಕೆ

DDPI, CHIKKODI

## ಸಮಾಜ ವಿಜ್ಞಾನ 40X1=40

81. ಬಂಗಾಳದಲ್ಲಿ ದ್ವಿ ಪ್ರಭುತ್ವ ಪದ್ಧತಿಯನ್ನು ಜಾರಿಗೆ ತಂದವನು
A. ಸರ್ ಐರ್ ಕೂಟ B. ಸರ್ ಥಾಮಸ್ ರೋ
C. ರಾಬರ್ಟ್ ಕ್ಲೈವ್ D. ಹೆಕ್ಟರ್ ಮನ್ರೋ

82. ಪೇಶ್ವೆಯು ಈ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿದನು.
A. ಸಾಲ್‌ಬಾಯ ಒಪ್ಪಂದ B. ಲಾಹೋರ್ ಒಪ್ಪಂದ
C. ನಿರಂತರ ಮೈತ್ರಿ ಒಪ್ಪಂದ D. ಬೆಸ್ಸಿನ್ ಒಪ್ಪಂದ

83. ನಾಗರೀಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದ ಸ್ಥಳ
A. ಮುಂಬೈ B. ಕಲ್ಕತ್ತಾ
C. ಮದ್ರಾಸ D. ಸೂರತ

84. ಮೂರನೆಯ ಆಂಗ್ಲೋ ಮೈಸೂರು ಯುದ್ಧ ಈ ಒಪ್ಪಂದದೊಂದಿಗೆ ಕೊನೆಯಾಯಿತು
A. ಮಂಗಳೂರು ಒಪ್ಪಂದ B. ಮದ್ರಾಸ್ ಒಪ್ಪಂದ
C. ಶ್ರೀರಂಗಪಟ್ಟಣ ಒಪ್ಪಂದ D. ಲಾಹೋರ್ ಒಪ್ಪಂದ

85. ಸುರಪುರ ಸಂಸ್ಥಾನಕ್ಕೆ ಬ್ರಿಟಿಷರು ನೇಮಿಸಿದ ಪೊಲಿಟಿಕಲ್ ಏಜೆಂಟ
A ಮೆಡೋಸ್ ಟೇಲರ್ B. ಮಾರ್ಕಕಬ್ಬನ್
C. ಥ್ಯಾಕರೆ D. ಮೆಕಾಲೆ

86. ಹೆನ್ರಿ ವಿವಿಯನ್ ಡಿರೋಜಿಯೋ ಅವರು ಕಟ್ಟಿದ ಚರ್ಚಾ ವೇದಿಕೆ
A. ಥಿಯೋಸಾಫಿಕಲ್ ಸೊಸೈಟಿ B. 'ಅಕಾಡೆಮಿಕ್ ಅಸೋಸಿಯೇಷನ್'
C. ಜಸ್ಟೀಸ್ ಪಾರ್ಟಿ D. ಸೆಲ್ಫ್ ರೆಸ್ಪೆಕ್ಟ್ ಲೀಗ್

87. 'ರಿವೋಲ್ಟ್' ಪತ್ರಿಕೆಯನ್ನು ಹುಟ್ಟು ಹಾಕಿದವರು
A. ಅನಿಬೆಸೆಂಟ್ B. ಶ್ರೀ ನಾರಾಯಣಗುರು
C. ಸರ್ ಸಯ್ಯದ್ ಅಹಮದ್ ಖಾನ್ D. ಪೆರಿಯಾರ್

88. ಝಾನ್ಸಿಯಲ್ಲಿ ದಂಗೆಯ ನಾಯಕತ್ವ ವಹಿಸಿದವರು
A. ತಾತ್ಯಾ ಟೋಪೆ B. ಎರಡನೇ ಬಹುದ್ದೂರ ಷಾ
C. ರಾಣಿ ಲಕ್ಷ್ಮಿಬಾಯಿ D. ನಾನಾ ಸಾಹೇಬ

89. 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ' ಎಂದು ಘೋಷಣೆ ಮಾಡಿದವರು
A. ಅರಬಿಂದೋ ಘೋಷ್ B. ಬಿಪಿನ್ ಚಂದ್ರ ಪಾಲ್
C. ಲಾಲ ಲಜಪತರಾಯ್ D. ಬಾಲ ಗಂಗಾಧರ್ ತಿಲಕ್

90. ಬಂಗಾಳದ ವಿಭಜನೆಯನ್ನು ರೂಪಿಸಿದ ವೈಸ್‌ರಾಯ್
A. ಲಾರ್ಡ್ ಕರ್ಜನ್ B. ಲಾರ್ಡ್ ರಿಪ್ಪನ್
C. ಲಾರ್ಡ್ ಲಿಟ್ಟನ್ D. ಲಾರ್ಡ್ ಮಿಂಟೋ

91. "ಫಾರ್ವರ್ಡ್ ಬ್ಲಾಕ್' ಎಂಬ ಹೊಸ ಪಕ್ಷವನ್ನು ಕಟ್ಟಿದವರು
A. ಡಾ. ಬಿ. ಆರ್. ಅಂಬೇಡ್ಕರ್ B. ಸುಭಾಷ್ ಚಂದ್ರ ಬೋಸ
C. ಮೋತಿಲಾಲ್ ನೆಹರು D. ಚಿತ್ತರಂಜನದಾಸ್

PRASANTH KUMAR ROYAL'S, M.A, B.Ed, D.Ed
DDPI CHIKKODI

92. ಡಾ. ಬಿ. ಆರ್. ಅಂಬೇಡ್ಕರ್ ಅವರು ಹೊರಡಿಸಿದ ಪತ್ರಿಕೆ

A. ಹರಿಜನ B. ಸಂವಾದ ಕೌಮುದಿ

C. ಮೂಕ ನಾಯಕ D. ಯಂಗ್ ಇಂಡಿಯಾ

93. ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು

A. ಕೆ. ಎಂ. ಫಣಿಕ್ಕರ್ B. ಹೆಚ್.ಎನ್.ಕುಂಜ್ರು

C. ಫಜಲ್ ಅಲಿ D. ರ್‍ಯಾಡ್ ಕ್ಲಿಫ್

94. ಧರ್ಮದ ಆಧಾರದಲ್ಲಿ ಸಮಾಜದ ವಿಭಜನೆ ಹಾಗೂ ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು ಬೆಳಸಿಕೊಳ್ಳುವುದು

A. ಸಮಾಜವಾದ B. ಕೋಮುವಾದ

C. ಭ್ರಷ್ಟಾಚಾರ D. ಭಯೋತ್ಪಾದನೆ

95. ಆಫ್ರಿಕಾದ ಗಾಂಧಿ ಎಂದೇ ಪ್ರಸಿದ್ಧರಾದವರು.

A. ಚೌ ಎನ್ ಲಾಯ್ B. ನೆಲ್ಸನ್ ಮಂಡೇಲ

C. ಜಾನ್ ಡಿ ಕ್ಲರ್ಕ್ D. ಜಾಕೋಬ ಜುಮಾ

96. ತಾಷ್ಕೆಂಟ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು

A. ಭಾರತ–ಚೀನಾ B. ಭಾರತ–ಅಮೇರಿಕಾ

C. ಭಾರತ–ಪಾಕಿಸ್ತಾನ D. ಭಾರತ–ರಷ್ಯಾ

97. ಮಾನವ ಹಕ್ಕುಗಳ ಪರಿಕಲ್ಪನೆಯನ್ನು ವಿಶ್ವ ಸಂಸ್ಥೆ ಸಾಮಾನ್ಯ ಸಭೆ ಅಂಗೀಕರಿಸಿತು.

A. 1948ರ ಡಿಸೆಂಬರ್12 B. 1948ರ ಡಿಸೆಂಬರ್ 10

C. 1948ರ ಡಿಸೆಂಬರ್ 11 D. 1948ರ ಡಿಸೆಂಬರ್ 13

98. ವಿಶ್ವ ಸಂಸ್ಥೆಯ ಸಚಿವ ಸಂಪುಟ

A. ಭದ್ರತಾ ಸಮಿತಿ B. ಸಾಮಾನ್ಯ ಸಭೆ

C. ಸಚಿವಾಲಯ D. ದತ್ತಿ ಸಮಿತಿ

99. ಸಮಾಜದಲ್ಲಿ ವರ್ಗ ವ್ಯವಸ್ಥೆ ಉಂಟಾಗಲು ಕಾರಣ

A. ಚಾತುರ್ವರ್ಣ ಪದ್ಧತಿ B. ಜಾತಿ ವ್ಯವಸ್ಥೆ

C. ಅಸ್ಪೃಶ್ಯತೆ D. ಅಂತರ್ಜಾತಿ ವ್ಯವಸ್ಥೆ

100. 'ಶ್ರಮ ವಿಭಜನೆಯು ಕಡಿಮೆ ಕೌಶಲ್ಯವಿರುವ ಕೆಲಸಗಾರರನ್ನು ನಿರ್ಮಿಸುತ್ತದೆ." ಎಂದು ಹೇಳಿದವರು

A. ಕಾರ್ಲಮಾರ್ಕ್ಸ B. ಪ್ಲೇಟೋ

C. ಅರಿಸ್ಟಾಟಲ್ D. ಗಾಂಧೀಜಿ

101. ಕೈಗಾ ಅಣುವಿದ್ಯುತ್ ಸ್ಥಾವರ ವಿರೋಧಿ ಚಳುವಳಿಯ ನಾಯಕತ್ವ ವಹಿಸಿದ್ದವರು

A. ಸುಂದರಲಾಲ ಬಹುಗುಣ B. ಕುಸುಮಾ ಸೊರಬ

C. ಶಿವರಾಮ ಕಾರಂತ D. ಮೇಧಾ ಪಾಟ್ಕರ

102. ಕಾಣದ ಹಸಿವು ಎಂದರೆ

A. ವಿಟಮಿನ್‌ಗಳ ಕೊರತೆ B. ವಿಟಮಿನ್‌ಗಳ ಲಭ್ಯತೆ

C. ಪೋಷಕಾಂಶಗಳ ಕೊರತೆ D. ಪೋಷಕಾಂಶಗಳ ಲಭ್ಯತೆ

PRASANTH KUMAR ROYAL'S, M.A, B.Ed, D.Ed

DDPI CHIKKODI

103. ಆವರ್ತ ಮಾರುತಗಳಿಂದ ಹೆಚ್ಚು ಹಾನಿಗೊಳಗಾಗುವ ರಾಜ್ಯಗಳು.

A. ತಮಿಳುನಾಡು, ಕೇರಳ, ಕರ್ನಾಟಕ
B. ಕೇರಳ ಗುಜರಾತ, ಓಡಿಸ್ಸಾ
C. ತಮಿಳುನಾಡು, ಆಂಧ್ರಪ್ರದೇಶ, ಓಡಿಸ್ಸಾ
D. ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ

104. ಜಿಂದಾಲ್ ವಿಜಯನಗರ ಉಕ್ಕಿನ ಕಾರ್ಖಾನೆ ಇರುವ ರಾಜ್ಯ

A. ಕರ್ನಾಟಕ
B. ಛತ್ತೀಸಗಡ
C. ಪಶ್ಚಿಮ ಬಂಗಾಳ
D. ಓಡಿಸ್ಸಾ

105. ರಾಜ್ಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಯ ಜವಾಬ್ದಾರಿ ಇವರದಾಗಿದೆ.

A. ಕೇಂದ್ರ ಲೋಕೋಪಯೋಗಿ ಇಲಾಖೆ
B. ರಾಜ್ಯ ಲೋಕೋಪಯೋಗಿ ಇಲಾಖೆ
C. ಭಾರತದರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ
D. ಜಿಲ್ಲಾ ಪಂಚಾಯತ್

106. ನದಿ ದಂಡೆಯ ಮೇಲಿರುವ ಬಂದರು

A. ಚೆನ್ನೈ
B. ವಿಶಾಖಪಟ್ಟಣಂ
C. ಕೋಲ್ಕತ್ತಾ
D. ಎನ್ನೋರಾ

107. ಕೆಳಗಿನವುಗಳಲ್ಲಿ ಇದು ಸಮೂಹ ಮಾಧ್ಯಮವಾಗಿದೆ.

A. ದೂರವಾಣಿ
B. ರೇಡಿಯೋ
C. ಅಂಚೆ
D. ಇ– ಮೇಲ್

108. ಬೆಳೆ ಪಶುಪಾಲನೆ ಮತ್ತು ಜೇನು ಸಾಕಣೆಯನ್ನು ಒಳಗೊಂಡ ಕೃಷಿ ಪದ್ಧತಿ

A. ಸ್ಥಿರ ಬೇಸಾಯ
B. ತೋಟಗಾರಿಕೆ ಬೇಸಾಯ
C. ಮಿಶ್ರ ಬೇಸಾಯ
D. ವರ್ಗಾವಣೆ ಬೇಸಾಯ

109. ದಕ್ಷಿಣ ಭಾರತದ ಉದ್ದವಾದ ನದಿ

A. ನರ್ಮದಾ
B. ತಾಪಿ
C. ಮಹಾನದಿ
D. ಗೋಧಾವರಿ

110. ನದಿ ಮುಖಜ ಭೂಮಿಗಳಲ್ಲಿ ಕಂಡು ಬರುವ ಅರಣ್ಯಗಳು

A. ಮ್ಯಾಂಗ್ರೋವ್ ಕಾಡುಗಳು
B. ಪರ್ವತ ಕಾಡುಗಳು
C. ಮಾನ್ಸೂನ್ ಕಾಡುಗಳು
D. ಮರಭೂಮಿ ಸಸ್ಯವರ್ಗ

111. ಹತ್ತಿ ಬೇಸಾಯ :ಕಪ್ಪು ಮಣ್ಣು :: ನೆಡುತೋಟದ ಬೆಳೆಗಳ ಬೇಸಾಯ : __________

A. ಜಂಬಟ್ಟಿಗೆ ಮಣ್ಣು
B. ಪರ್ವತ ಮಣ್ಣು
B. ಮರಭೂಮಿ ಮಣ್ಣು
D. ಕೆಂಪು ಮಣ್ಣು

112. ಭಾರತದಲ್ಲಿ ವಾರ್ಷಿಕ 50 ಸೆಂ.ಮೀ ಗಳಿಗಿಂತ ಕಡಿಮೆ ಮಳೆ ಬೀಳುವ ಪ್ರದೇಶ

A. ಉತ್ತರ ಜಾಸ್ಕರ್ ಶ್ರೇಣಿ
B. ಕಛನ ಪಶ್ಚಿಮ ಭಾಗ
C. ರಾಜಸ್ಥಾನದ ಥಾರ ಮರಭೂಮಿ
D. ಮೇಲಿನ ಎಲ್ಲವೂ

113. ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಈ ಬೆಟ್ಟಗಳಲ್ಲಿ ಸಂಧಿಸುತ್ತವೆ.

A. ಅರಾವಳಿ
B. ನೀಲಗಿರಿ
C. ರಾಜಮಹಲ್
D. ಯಾವುದೂಅಲ್ಲ

PRASANTH KUMAR ROYAL'S, M.A, B.Ed, D.Ed
DDPI, CHIKKODI

114. ಒಂದು ರಾಷ್ಟ್ರವು ಒಂದು ವರ್ಷದಲ್ಲಿ ಉತ್ಪಾದಿಸಿದ ಎಲ್ಲ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯ

A. ತಲಾ ವರಮಾನ  B. ರಾಷ್ಟ್ರೀಯ ವರಮಾನ

C. ರಾಜ್ಯದ ವರಮಾನ  D. ಸ್ಥಳೀಯ ವರಮಾನ

115. ಸಂವಿಧಾನದ 73 ನೇ ತಿದ್ದುಪಡಿಯ ಪ್ರಕಾರ ಭಾರತದಲ್ಲಿ ______ಹಂತದ ಪಂಚಾಯ್ತಿಗಳು ಅಸ್ತಿತ್ವದಲ್ಲಿವೆ.

A. 6  B. 5

C. 4  D. 3

116. ಸಾಮಾನ್ಯವಾಗಿ ಗ್ರಾಮ ಸಭೆಗಳ ಸದಸ್ಯರೆಂದರೆ

A. ಗ್ರಾಮದ ಎಲ್ಲ ಮತದಾರರು  B. ಗ್ರಾಮದ ಸಮಸ್ತ ಪ್ರಜೆಗಳು

C. ಗ್ರಾಮ ಪಂಚಾಯತಿಯ ಸರ್ವ ಸದಸ್ಯರು  D. ಗ್ರಾಮದಲ್ಲಿನ ಸರಕಾರಿ ನೌಕರರು

117. ಬ್ಯಾಂಕೋ ಎಂಬ ಪದವು ಈ ಭಾಷೆಯ ಪದವಾಗಿದೆ

A. ಫ್ರೆಂಚ್  B. ಇಟಾಲಿಯನ್

C. ಡಚ್ಚ  D. ಪೋರ್ಚುಗೀಸ್

118. ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿದ ಜನತೆಯ ಖಾತೆ

A. ನಿಶ್ಚಿತ ಠೇವಣಿ ಖಾತೆ  B. ಆವರ್ತ ಠೇವಣಿ ಖಾತೆ

C. ಚಾಲ್ತಿ ಖಾತೆ  D. ಉಳಿತಾಯ ಖಾತೆ

119. ಗ್ರಾಹಕನಿಗಿರುವ ಇನ್ನೊಂದು ಹೆಸರು

A. ಬಳಕೆದಾರ  B. ಪೂರೈಕೆದಾರ

B. ಉತ್ಪಾದಕ  D. ವ್ಯಾಪಾರಿ

120. ಗ್ರಾಹಕನನ್ನು ಹೀಗೆಂದು ಸಹ ಕರೆಯುತ್ತಾರೆ

A. ಮಾರುಕಟ್ಟೆಯ ರಾಣಿ  B. ಮಾರುಕಟ್ಟೆಯ ರಾಜ

B. ಮಾರುಕಟ್ಟೆಯ ಸಿಪಾಯಿ  D. ಮಾರುಕಟ್ಟೆಯ ಒಡೆಯ

*********************************************

ಪ್ರೀಯ ವಿದ್ಯಾರ್ಥಿಗಳೇ, ಪ್ರಶ್ನೆ-ಪತ್ರಿಕೆಯನ್ನು ಪೂರ್ಣವಾಗಿ ಅರ್ಥೈಸಿಕೊಂಡು ಉತ್ತರಿಸಿ

Think Before Ink……… All the best….

ಶ್ರೀ ಅರಿಹಂತ ಬಿರಾದಾರಪಾಟೀಲ
ಎಸ್.ಎಸ್.ಎಲ್.ಸಿ. ಪರೀಕ್ಷೆಗಳ
ಜಿಲ್ಲಾ ನೋಡಲ್ ಅಧಿಕಾರಗಳು

ಶ್ರೀ ಗಜಾನನ ಮನ್ನಿಕೇರಿ
ಉಪನಿರ್ದೇಶಕರು,
ಸಾ.ಶಿ.ಇಲಾಖೆ, ಚಿಕ್ಕೋಡಿ

ಹಾಗೂ

ಪ್ರಶ್ನೆ-ಪತ್ರಿಕೆ ತಯಾರಿಕೆಯ ಜಿಲ್ಲಾ ಸಂಪನ್ಮೂಲ ತಂಡ

PRASANTH KUMAR ROYAL'S, M.A, B.Ed, D.Ed
DDPI CHIKODI